ಶ್ರೀ ಎಚ್. ಎನ್. ನಂಜೇಗೌಡ.—ಒರಿಜನಲ್ ಎಸ್ಟಿಮೇಟಿನ ಪ್ರಕಾರ 32 ಸಾವಿರ ಎಕರೆ ಬೇಲೂರು, ಹಾಸನ ಮತ್ತು ಅಲೂರು ತಾಲ್ಲೂಕುಗಳಲ್ಲಿ ನೀರಾವರಿಯಾಗುವುದು.

Transfer of Department of National Fitness Corps

331. Sri T. R. SHAMANNA (Fort).—

Will the Minister of State for Youth Services be pleased to state:—

(*a*) whether any proposal has been made by the Central Government to transfer the Department of National Fitness Corps to the respective State Governments ;

(*b*) if so, the terms under which such a transfer is being effected ?

Sri V. S. KOUJALGI (Minister of State for Youth Services).—

(*a*) Yes.

(*b*) The terms are not yet finalised and are under consideration.

ಶ್ರೀ ಟಿ. ಆರ್. ಶಾಮಣ್ಣ.—ಈ ನ್ಯಾಷನಲ್ ಫಿಟ್‌ನೆಸ್ ಕಾರ್ಪ್ಸ್‌ನಲ್ಲಿ ಸರ್ವೆ ಮಾಡಿರುವವರನ್ನು ಈಗ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಗಳಿಗೆ ವಹಿಸುವುದರಿಂದ ಅವರಿಗೆ 10–12 ವರ್ಷ ಸರ್ವಿಸ್ ಆಗಿರುವಾಗ ಅವರಿಗೆ ಸೇವೆಗೆ ತಕ್ಕಂತೆ ದೊರೆಯಬೇಕಾದ ಸೌಲಭ್ಯಗಳನ್ನು ದೊರಕಿಸಿ ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ವಿ. ಎಸ್. ಕೌಜಲಗಿ.—ಈಗ ಆ ವಿಚಾರ ಇನ್ನೂ ಪರಿಶೀಲನೆಯಲ್ಲಿದೆ, ಅದಾದನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಟಿ. ಆರ್. ಶಾಮಣ್ಣ.—ಈಗ ಕೇಂದ್ರ ಸರ್ಕಾರದವರು ಇದಕ್ಕೆ ತಗಲುವ ಖರ್ಚನ್ನು ಕೇವಲ 5 ವರ್ಷ ಮಾತ್ರ ಕೊಡುವುದಾಗಿ ಹೇಳುತ್ತಿರುವರು, ಮುಂದೆಯೂ ಕೂಡ ಅವರಿಗೆ ಬೇಕಾದ ಸೌಲಭ್ಯ ಒದಗಿಸಿ ಸಂಬಂಧಪಟ್ಟವರ ಸೇವೆಯನ್ನು ಮುಂದುವರಿಸುವಿರಾ ?

ಶ್ರೀ ವಿ. ಎಸ್. ಕೌಜಲಗಿ.—ಕೇಂದ್ರ ಸರ್ಕಾರದವರು ಪರಿಪೂರ್ಣವಾಗಿ ಪಗಾರ ಮತ್ತು ಪೆನ್‌ಷನ್ ಕೊಡುವುದಕ್ಕೆ ಒಪ್ಪಿದ್ದಾರೆ. ಈಗ ವಿಚಾರ ಪರಿಶೀಲನೆಯಲ್ಲಿದೆ. ಅದಾದನಂತರ ಮುಂದಿನ ವಿಚಾರ ಯೋಚನೆಮಾಡಲಾಗುವುದು.

ಶ್ರೀ ಕೊಣಂದೂರು ಲಿಂಗಪ್ಪ.—ಅವರನ್ನು ನಮ್ಮ ರಾಜ್ಯ ಸರ್ಕಾರದಲ್ಲಿ ಡ್ರಿರ್ ಇನ್‌ಸ್ಪೆಕ್ಟರಾಗಿ ತೆಗೆದುಕೊಂಡು ಅವರ ಸರ್ವಿಸ್ಸಿಗೆ ಮನ್ನಣೆ ಕೊಟ್ಟು ಇನ್‌ಕ್ರೆಮೆಂಟು ಇತ್ಯಾದಿ ಕೊಡಲು ರಾಜ್ಯಸರ್ಕಾರಕ್ಕೆ ತೊಂದರೆಯೇನು ?

ಶ್ರೀ ವಿ. ಎಸ್. ಕೌಜಲಗಿ.—ಈಗ ನಮ್ಮ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಅದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಉತ್ತರದಲ್ಲಿ ಷರತ್ತುಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ, ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದೆ. ಅಂತಿಮಗೊಳಿಸಲು ಇನ್ನೂ ಎಷ್ಟು ದಿನ ಬೇಕು ?

ಶ್ರೀ ವಿ. ಎಸ್. ಕೌಜಲಗಿ.—ಇನ್ನೂ ಪರಿಶೀಲನೆಯಲ್ಲಿದೆ, ಕೇಂದ್ರ ಸರ್ಕಾರದೊಡನೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕು, ಅದಾಗುವವರೆಗೆ ಏನೂ ಹೇಳುವಂತಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ನಮ್ಮ ಯುವಕರಲ್ಲಿ ರಾಷ್ಟ್ರ ಪ್ರೇಮ ಮತ್ತು ರಾಷ್ಟ್ರ ಭಕ್ತಿ ಬೆಳೆಸುವುದಕ್ಕೆ ಸಾಕಾದಷ್ಟು ತರಬೇತಿ ಕೊಡುವುದರಿಂದ ಇದಕ್ಕೆ ಬೇಕಾದ ನಲಕರಣೆ ಒದಗಿಸಿ ಯಾವ ಉದ್ದೇಶದಿಂದ ಇದನ್ನು ಸ್ಥಾಪಿಸಿದೆ ಎಂಬುದನ್ನು ಗಮನಿಸಿ ಮುಂದುವರೆಸಲು ರಾಜ್ಯ ಸರ್ಕಾರ ಮನಸ್ಸುಮಾಡುವುದೇ ?

ಶ್ರೀ ಎ. ಎಸ್. ಕಾಜಲಗಿ.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ, ಬೇಕಾದರೆ ಪ್ರಶ್ನೆ ಬೇರೆ ಹಾಕಿ.

Construction of Bus stand at Mahalingapur

353. Sri K. P. NADGOUDA (Mudhol).—

Will the Minister for Labour be pleased to state:—

(*a*) the date of laying the foundation stone for construction of a new bus stand at Mahalingapur ;

(*b*) the reasons for delay in its construction ;

(*c*) whether the Government intends to complete the same this year ?

Sri AZEEZ SAIT (Minister for Labour).—

(*a*) 22nd February 1965.

(*b*) The Contractor to whom the work was entrusted, abandoned the work. His agency had to be terminated and fresh tenders had to be finalised.

(*c*) The work is recently resumed by M.S.R.T.C. and expected to be completed during the next year.

ಶ್ರೀ ಕೆ. ಪಿ. ನಾಡಗೌಡ.—ಈ ಕಂಟ್ರಾಕ್ಟರು ಯಾವ ತಾರೀಖು ಕೆಲಸ ಪ್ರಾರಂಭ ಮಾಡಿದ ಮತ್ತು ಯಾವ ತಾರೀಖು ಕೆಲಸ ಬಿಟ್ಟ ಎಂಬುದನ್ನು ತಿಳಿಸುವಿರಾ ?

†Sri AZEEZ SAIT.—This work was sanctioned in the year 1963-67. I have no information as to when the work was started and stopped by the contractor. However, his agency has been terminated. ಅವನ್ನು ರದ್ದು ಮಾಡಿದಮೇಲೆ ಹೊಸ ಟೆಂಡರನ್ನು ಕರೆದು ಬೇರೆಯವರಿಗೆ ಕೆಲಸ ವಹಿಸಲಾಗಿದೆ.

ಶ್ರೀ ಕೆ. ಪಿ. ನಾಡಗೌಡ.—ಹೊಸ ಟೆಂಡರನ್ನು ಒಪ್ಪಿಕೊಳ್ಳಲಾಗಿದೆಯೇ ?

Sri AZEEZ SAIT.—Tender has been approved.

ಶ್ರೀ ಕೆ. ಪಿ. ನಾಡಗೌಡ.—ಈ ಕೆಲಸ ಯಾವಾಗ ಪೂರ್ಣವಾಗುವುದು ?

ಶ್ರೀ ಅಜೀಜ್‌ಸೇಟ್.—ಒಂದು ವರ್ಷದಲ್ಲಿ ಪೂರ್ಣವಾಗುವ ನಿರೀಕ್ಷೆಯಿದೆ.

ಶ್ರೀ ಪಿ. ಎಂ. ಭಂಗಿ.—ಹಿಂದಿನ ಕಂಟ್ರಾಕ್ಟರು ಯಾರು ? ಈಗ ಹೊಸ ಟೆಂಡರನ್ನು ಯಾವ ದಿವಸ ಮಂಜೂರು ಮಾಡಲಾಗಿದೆ ? ಹೊಸಬರಾದರೂ ಕೆಲಸ ಪೂರ್ಣ ಮಾಡುವರೆಂಬ ಭರವಸೆ ಯಿದೆಯೇ ?